**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಚಿದಾನಂದ್ ಎಂ.ಗೌಡ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಉತ್ತರ.**

**ಪ್ರಶ್ನೆ:**

ಶತಮಾನ ಕಂಡಿರುವ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಹಿಂದೇಟು ಹಾಕಿದ ಪರಿಣಾಮ ಈ ವರ್ಷ 9 ವಿಭಾಗಗಳು ಮುಚ್ಚುವ ಭೀತಿ ಎದುರಿಸುತ್ತಿವೆ. ಮೈಸೂರು ವಿವಿಯ ಸ್ನಾತಕೋತ್ತರ ಪದವೀಧರ ಎಂದರೆ ಹಿಂದೆ ಬಹಳ ಬೆಲೆಯಿತ್ತು ರಾಜ್ಯದ ಇತರೆ ವಿವಿಗಳಿಗಿಂತ ಹೆಚ್ಚು ತಾರಾ ಮೌಲ್ಯವಿತ್ತು. ಒಂದೊಳ್ಳೆ ಬ್ರಾಂಡ್ ಕೂಡಾ ಇತ್ತು. ಆದರೆ, ಇಂದು ವಿವಿ ತನ್ನ ತಾರಾ ಆಕರ್ಷಣೆಯನ್ನೇ ಕಳೆದು ಕೊಳ್ಳುತ್ತಿದೆ. 9 ವಿಭಾಗಗಳಿಗೆ ವಿದ್ಯಾರ್ಥಿಗಳೇ ಇಲ್ಲ, 20 ವಿಷಯಗಳಿಗೆ ಸಿಇಟಿ ರದ್ದು ಮಾಡಲಾಗಿದೆ. ಕಳೆದ ವರ್ಷ ಪ್ರವೇಶ ಬಯಸಿ ಬಂದ ಅರ್ಜಿಗಳು 9000 (ಒಂಬತ್ತು ಸಾವಿರ), ಈ ವರ್ಷ ಕೇವಲ 5,111 ಅರ್ಜಿಗಳು ಬಂದಿವೆ. ಅದರಲ್ಲಿ 4833 ವಿದ್ಯಾರ್ಥಿಗಳು ಮಾತ್ರ ಸಾಮಾನ್ಯ ಪ್ರವೇಶ ಪರೀಕ್ಷೆ ಎದುರಿಸಿದ್ದಾರೆ. ಮೈಸೂರು ವಿವಿಯಲ್ಲಿ 58 ವಿಷಯಗಳನ್ನು ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅವಕಾಶವಿದೆ. ಇದರಲ್ಲಿ 20 ವಿಭಾಗಗಳಿಗೆ ಕಡಿಮೆ ಅರ್ಜಿಗಳು ಬಂದಿವೆ.

ಎಂ.ಎ ಸಂಸ್ಕೃತ-02, ಎಂ.ಎಸ್ಸಿ ಮಾಹಿತಿ ತಂತ್ರಜ್ಞಾನ-02, ಎಂ.ಎ ಹಿಂದಿ-02, ಎಂಎಸ್‌ಸಿ ಅನಿಮೇಶನ್-03, ಎಂಎಸ್‌ಸಿ ಹ್ಯೂಮನ್ ಡೆವಲಪ್‌ಮೆಂಟ್-09, ಎಂಟೆಕ್ ಮೆಟರಿಯಲ್ ಸೈನ್ಸ್-11, ಎಂ.ಎ ಸಾರ್ವಜನಿಕ ಆಡಳಿತ-12, ಎಂಎ ಉರ್ದು-13, ಎಂ.ಎ ಮಾನವಶಾಸ್ತ್ರ-12 ಅರ್ಜಿಗಳು ಬಂದಿವೆ. ಯಾವುದೇ ವಿಭಾಗವನ್ನು ನಡೆಸಬೇಕಾದರೆ ಕನಿಷ್ಟ-15 ವಿದ್ಯಾರ್ಥಿಗಳು ದಾಖಲಾಗಿರಬೇಕು. ಹೀಗಾಗಿ 15 ಕ್ಕಿಂತ ಕಡಿಮೆ ಅರ್ಜಿ ಬಂದಿರುವ 9 ವಿಭಾಗಗಳಿಗೆ ಮುಚ್ಚುವ ಆತಂಕ ಎದುರಾಗಿದೆ.

ಕೇಂದ್ರ ಸರ್ಕಾರ ಸೆಂಟ್ರಲ್ ಆಫ್ ಎಕ್ಸಲೆನ್ಸ್ ಎಂಬ ಅಭಿಯಾನದಡಿಯಲ್ಲಿ ಮೈಸೂರು ವಿವಿಗೆ ಭರಪೂರವಾದ ಅನುದಾನವನ್ನು ಸಹ ನೀಡಿತ್ತು. ಆದರೆ ಖಾಯಂ ಬೋಧಕರ ಕೊರತೆ, ಖಾಸಗಿ ಶಿಕ್ಷಣ ಸಂಸ್ಥೆಗಳ ಪೈಪೋಟಿ, ವಿವಿಯಿಂದ ಸಮರ್ಪಕವಾಗಿ ನಡೆಯದ ಕ್ಯಾಂಪಸ್ ಸೆಲಕ್ಷನ್, ಪ್ರಾಧ್ಯಾಪಕರ ಜಾತಿರಾಜಕಾರಣ ಈ ಎಲ್ಲಾ ಕಾರಣಗಳಿಂದ ವಿವಿ ತನ್ನ ತಾರಾಕರ್ಷಣೆಯಲ್ಲಿ ಕಳೆದುಕೊಳ್ಳುತ್ತಿದೆ. ವಿವಿಗೆ ಹೆಸರು ತರುವಂತಹ ಪ್ರಾಧ್ಯಪಕರನ್ನು ನೇಮಕ ಮಾಡಿ ವಿದ್ಯಾರ್ಥಿಗಳನ್ನು ಆಕರ್ಷಿಸಿ ಈ ಹಿಂದಿನ ಬ್ರಾಂಡ್ ಅನ್ನು ಉಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಈ ವಿಷಯದ ಕುರಿತು ದಿನಾಂಕ:13.08.2025ರಂದು ವಿಜಯ ಕರ್ನಾಟಕದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟವಾದ ವರದಿಯ ನಕಲನ್ನು ಲಗತ್ತಿಸಿರುತ್ತೇನೆ. ಈ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುತ್ತೇನೆ.

**ಉತ್ತರ:**

ಮೈಸೂರು ವಿಶ್ವವಿದ್ಯಾಲಯದಲ್ಲಿನ ಸಂಯೋಜಿತ ಕಾಲೇಜುಗಳು, ಕೋರ್ಸುಗಳು, ಬೋಧಕ-ಬೋಧಕೇತರರ ಮಾಹಿತಿ ಈ ಕೆಳಕಂಡಂತಿದೆ;

**ಸಂಯೋಜಿತ ಕಾಲೇಜುಗಳು ಮತ್ತು ಕೋರ್ಸ್‌ಗಳ ವಿವರ:**

| ಸಂಯೋಜಿತ ಕಾಲೇಜುಗಳ ಸಂಖ್ಯೆ | ಕೋರ್ಸುಗಳ ವಿವರ | |
|---|---|---|
| | ಸ್ನಾತಕ | ಸ್ನಾತಕೋತ್ತರ |
| 105 | BA, B.Com., B.Sc., BBA, BCA, BPA, BALLB, BSW, B.Plan, BVA, BASLP, B.Arch, B.Ed., | MA, M.Sc., M.Com., M.Ed., MED, MCA, MSW, M.Arch, MPEd., PhD |

**ಬೋಧಕ-ಬೋಧಕೇತರರ ವಿವರ:**

| ಹುದ್ದೆಗಳ ವಿವರ | ಮಂಜೂರಾದ | ಭರ್ತಿಯಾದ | ಖಾಲಿಯಿರುವ | ಅತಿಥಿ ಉಪನ್ಯಾಸಕರು (Guest Faculty) |
|---|---|---|---|---|
| ಬೋಧಕ | 575 | 219 | 356 | 529 |
| ಬೋಧಕೇತರ | 560 | 357 | 203 | - |
| ಒಟ್ಟು | **1135** | **576** | **559** | **529** |

ಮೈಸೂರು ವಿಶ್ವವಿದ್ಯಾಲಯವು ಪ್ರಸ್ತುತ ಈ ಕೆಳಕಂಡಂತೆ ಸ್ನಾತಕ-ಸ್ನಾತಕೋತ್ತರ ಹಾಗೂ ಸಂಶೋಧನಾ ಕೋರ್ಸುಗಳನ್ನು ನಡೆಸುತ್ತಿದೆ.

**ಸ್ನಾತಕ ಕೋರ್ಸುಗಳ ವಿವರ;**

| Name of the Courses | No. of Students at present | Admission in last 02 years | | Admission in 2025-26 | Last date of Admission |
|---|---|---|---|---|---|
| | | 2023-24 | 2024-25 | | |
| B.A, B.Sc, B.Com, BCA, BBA, BVA, BPA, BSW, B.Com-LLB, BBA in Tourism and Travel, BBA in Tourism and Hospitality , BA.SLP, B.Ed, B.Arch, B.Plan, B.A.B.Ed | 79622 | 24446 | 23226 | Processing | 30.08.2025 |

**ಸ್ನಾತಕೋತ್ತರ ಕೋರ್ಸುಗಳ ವಿವರ;**

| Name of the Courses | No. of Students at present | Admission in last 02 years | | Admission in 2025-26 | Last date of Admission |
|---|---|---|---|---|---|
| | | 2023-24 | 2024-25 | | |
| MA, M.Sc, M.Com, MBA, MCA, M.Tech, M.Arch, M.Vooc, LLM, M.VA, M.Ed, M.Ped | 10295 | 6063 | 7693 | Processing | 10.09.2025 |

**ಪಿ.ಹೆಚ್.ಡಿ. ವಿವರ;**

| Name of the Courses | No. of Students at present | Admission in last 02 years | | Admission in 2025-26 | Last date of Admission |
|---|---|---|---|---|---|
| | | 2023-24 | 2024-25 | | |
| Ph.D | 2743 | 239 | 260 | 268 | No last date for Admission |

**ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎಸಿ., ವಿಭಾಗದಲ್ಲಿ ಈ ಕೆಳಕಂಡ ಕೋರ್ಸ್‌ಗಳನ್ನು ನಡೆಸುತ್ತಿದೆ;**

(a) Master of Science Course: Anthropology, Applied Zoology, Applied Geology, Biochemistry, Biotechnology, Botany, Chemistry, Computer Science, Environmental Science, Food Science and Nutrition, Genetics, Geography, Geology, Human Development and Family Studies, Mathematics, Microbiology, Organic Chemistry, Physics, Psychology, Sericulture and Seri Biotechnology, Statistics, Zoology, Geographical Information System (GIS), Molecular Biology.

(b) Master of Library and Information Science (M.L.I.Sc)

(c) M.Sc.Tech. in Data Analytics and Learning

(d) M.Sc.Tech in Computer Science and Technology – through Karnataka Examination Authority.

(e) M.Sc in Information Technology (for Foreign Nationals)

ಪ್ರಸ್ತುತ ಮೈಸೂರು ವಿಶ್ವವಿದ್ಯಾಲಯದಲ್ಲಿ ಬೋಧಕ-ಬೋಧಕೇತರ ಹುದ್ದೆಗಳು ಖಾಲಿಯಿದ್ದು, ಸದರಿ ಹುದ್ದೆಗಳನ್ನು ಮೈಸೂರು ವಿಶ್ವವಿದ್ಯಾಲಯವು ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನದಲ್ಲಿರುತ್ತದೆ. ಮೈಸೂರು ವಿಶ್ವವಿದ್ಯಾಲಯವನ್ನು ಒಳಗೊಂಡಂತೆ ರಾಜ್ಯದಲ್ಲಿರುವ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಬೋಧಕ/ಬೋಧಕೇತರ ಹುದ್ದೆಗಳು, ಮೂಲಭೂತ ಸೌಕರ್ಯಗಳ ಕೊರತೆಯಿದ್ದು, ಇಂತಹ ಕೊರತೆಗಳನ್ನು ನಿವಾರಿಸಲು ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡುವಂತೆ ಸರ್ಕಾರದಿಂದ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ದಿನಾಂಕ. 13.02.2025 ಮತ್ತು 09.05.2025ರಂದು ಸಭೆಗಳನ್ನು ನಡೆಸಿದ್ದು, ಯಾವುದೇ ಶಿಫಾರಸ್ಸುಗಳನ್ನು ನೀಡಿರುವುದಿಲ್ಲ. ಸದರಿ ಸಮಿತಿಯು ನೀಡುವ ಶಿಫಾರಸ್ಸುಗಳನ್ನು ಪರಿಶೀಲಿಸಿ, ಸಚಿವ ಸಂಪುಟದ ಮುಂದೆ ಮಂಡಿಸಿ ವಿಶ್ವವಿದ್ಯಾಲಯಗಳು ಶೈಕ್ಷಣಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಸದೃಢಗೊಳ್ಳಲು ಅಗತ್ಯ ಕ್ರಮವನ್ನು ಕೈಗೊಳ್ಳಲಾಗುತ್ತದೆ.

**ಸಂಖ್ಯೆ:** ಇಡಿ 108 ಯುಎಂವಿ 2025

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ, ಸಚಿವರು